# ಮನೆ ತುಂಬಿಸುವುದು

ಎಮ್ಮ ಮನೆಯಂಗಳದಿ ಬೆಳೆದೊಂದು ಹೂವನ್ನು
ನಿಮ್ಮ ಮಡಿಲೊಳಗಿಡಲು ತಂದಿರುವೆವು;
ಕೊಳ್ಳಿರೀ ಮಗುವನ್ನು ಎಮ್ಮ ಮನೆ ಬೆಳಕನ್ನು
ನಿಮ್ಮ ಮನೆಯನ್ನು ತುಂಬಲೊಪ್ಪಿಸುವೆವು.

ಮರೆಮೋಸ ಕೊಂಕುಗಳನರಿಯಳಿವಳು;
ಇನಿಸವಿಶ್ವಾಸವನು ಕಂಡರಿಯಳು;
ಕಷ್ಟಗಳ ಸೈಸದೆಯೆ ಕಾಣದಯೆ ಬೆಳೆದವಳು
ಸಲಹಿಕೊಳಿರೀ ಮಗಳನೊಪ್ಪಿಸುವೆವು.

ಕಠಿಣಗಳ ನೆಳಲ್ ಸುಳಿಯಲದುರಿ ಬಾಡುವಳು
ಹಿರಿ ಮಂಜು ಬಳಲಿಸಿದ ಹೂವಿನಂತೆ;
ಸುಖದಲ್ಲಿ ದುಃಖದಲಿ ಎಲ್ಲ ದೆಸೆಯರವಿನಲಿ
ನಿಮ್ಮ ಪಾಲಿಗೆ ನಿಲುವ ಕುವರಿಯಿವಳು.

ನಿಮಗಿವಳು ನೀಡುತಿಹ ಹಾಲುಹಣ್ಣುಗಳ ಸವಿ
ಎಂದೆಂದು ಅವಳ ನಡೆ ನಿಮ್ಮ ಪರವಾಗಿ
ನಮ್ಮ ಕುಲ ಮನೆಗಳಿಗೆ ಹೊರಗಾಗಿ ಬಂದಿಹಳು
ನಿಮ್ಮ ಕುಲವನು ಬೆಳಸೆ ಬಂದಿರುವಳು

ನಿನ್ನ ಮಡದಿಯ ಕೊಂಡು ಸುಖವಾಗಿರೌ, ಮಗುವೆ,
ನಿಮ್ಮ ಸೊಸೆ ಸೋದರಿಯು ಕೊಳ್ಳಿರಿವಳ;
ನಿಮ್ಮ ಕೀರುತಿ ಬೆಳೆಯಲಿವಳ ಸೌಜನ್ಯದಲಿ;
ನಿಮ್ಮ ಕುಲಶೀಲಗಳು ಪರಿಮಳಿಸಲಿ

ಹೆತ್ತವರ ಮನೆಗಿಂದು ಹೊರಗಾದೆ, ನೀ ಮಗಳೆ,
ಈ ಮನೆಯ ಈ ಇವರೆ ನಿನ್ನವರು ಮುಂದೆ;
ಇವರೆ ತಾಯ್ಗಳು ಸಖರು ಭಾಗ್ಯವನು ಬೆಳಸುವರು;
ಇವರ ದೇವರೆ ನಿನ್ನ ದೇವರುಗಳು

ನಿಲ್ಲು ಕಣ್ಣೊರೆಸಿಕೊಳು, ನಿಲ್ಲು ತಾಯ್! ಹೋಗುವೆವು;
ತಾಯ್ವಿರಾ, ತಂದೆಯಿರ, ಕೊಳ್ಳಿರಿವಳ;
ಎರಡು ಮನೆಗಳ ಹೆಸರು ಖ್ಯಾತಿಗಳು ಉಳಿವಂತೆ
ತುಂಬಿದಾಯುಷ್ಯದಲಿ ಬಾಳಿ ಬದುಕು.

'ಕಾದಿರುವಳು ಶಬರಿ, ರಾಮ ಬರುವೆನೆಂದು' ಕವಿತೆಯ ಮೂಲಕ ಕನ್ನಡದ ಹಲವು ತಲೆಮಾರುಗಳ ಓದುಗರಿಗೆ ಪರಿಚಿತರಾದ ಕವಿ, ವಿದ್ವಾಂಸ, ವಿಮರ್ಶಕ, ನಾಟಕಕಾರ, ಅನುವಾದಕ ವಿ. ಸೀತಾರಾಮಯ್ಯನವರು (ಅ. 2, 1899 – ಸೆ. 4, 1983) ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿನ ಬೂದಿಗೆರೆಯವರು. ರಾಜ್ಯದ ಹಲವೆಡೆ ಉಪನ್ಯಾಸಕರಾಗಿ ಕಾರ್ಯ ನಿರ್ವಹಿಸಿದವರು. ಸಂಗೀತದಲ್ಲೂ ಆಸಕ್ತಿ ಹೊಂದಿದ್ದರು. ಕನ್ನಡ ಸಾಹಿತ್ಯಕ್ಕೆ ಹಲವು ಹೊಸತುಗಳನ್ನು ಪರಿಚಯಿಸಿದವರು. ಅವರ ಸೊಗಸಾದ ಗದ್ಯದ 'ಪಂಪಾ ಯಾತ್ರೆ' ಕನ್ನಡದ ಮೊದಲ ಪ್ರವಾಸ ಕಥನ. 'ಗೀತಗಳು' ಕವನ ಸಂಕಲನದ ಗೀತೆಗಳು ಎಲ್ಲ ವರ್ಗದ ಓದುಗರಿಂದ ಮೆಚ್ಚುಗೆ ಪಡೆದಿವೆ. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ 'ಅರಲು ಬರಲು' ಮತ್ತೊಂದು ಪ್ರಸಿದ್ಧ ಕವನಸಂಕಲನ. 'ಕರ್ನಾಟಕ ಕಾದಂಬರಿ', 'ಅಭಿಜ್ಞಾನ ಶಾಕುಂತಲ ನಾಟಕ', 'ಅಶ್ವತ್ಥಾಮನ್' 'ಹಣ ಪ್ರಪಂಚ', 'ಸಾಹಿತ್ಯ ವಿಮರ್ಶೆಗಳಲ್ಲಿ ಅರ್ಥ ಮತ್ತು ಮೌಲ್ಯ' ಹಾಗೂ 'ಸತ್ಯ ಮತ್ತು ಮೌಲ್ಯ' ವಿ.ಸೀ. ಅವರ ವಿದ್ವತ್ತು ಮತ್ತು ಬಹುಮುಖ ಪ್ರತಿಭೆಗೆ ನಿದರ್ಶನದಂತಿರುವ ಕೃತಿಗಳು.